ಇಲ್ಲದಿರುವುದರಿಂದ, ಸರ್ವೋಚ್ಚ ನ್ಯಾಯಾಲಯಕ್ಕಾಗಲೀ ಅಥವಾ ಇನ್ನು ಯಾವುದೇ ನ್ಯಾಯಾಲಯಕ್ಕಾಗಲೀ ಮೇಲ್ಮನವಿ ಸಲ್ಲಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ

ರಾಜ್ಯ ಸರ್ಕಾರವು ಸರ್ಕಾರಿ ಹುದ್ದೆಗಳನ್ನು ರದ್ದುಪಡಿಸಿರುವ ಬಗ್ಗೆ

6/0 (450) ಶ್ರೀ ರವೀಂದ್ರನಾಥ ಎಸ್ ಎ (ಮಾಯಕೊಂಡ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಂದು ಸಾವಿರ ಸರ್ಕಾರಿ ಹುದ್ದೆಗಳನ್ನು ಸರ್ಕಾರ ರದ್ದುಪಡಿಸಿ ಆದೇಶ ಹೊರಡಿಸಿದೆಯೇ

ಆ) ಯಾವಾಗಿನಿಂದ ಈ ಆದೇಶ ಬರುತ್ತದೆ ಯಾವ ಯಾವ ಹುದ್ದೆಗಳನ್ನು ರದ್ದುಪಡಿಸಲಾಗಿದೆ

ಇ) ಇದರಿಂದ ಸರ್ಕಾರಕ್ಕೆ ವಾರ್ಷಿಕ ಉಳಿತಾಯವಾಗುವ ಮೊತ್ತ ಎಷ್ಟು

ಈ) ಭವಿಷ್ಯದ ಇನ್ನಷ್ಟು ಹುದ್ದೆಗಳನ್ನು ರದ್ದು ಪಡಿಸಲು ಸರ್ಕಾರ ಚಿಂತಿಸಿದೆ (ಯಾವ ಯಾವ ಇಲಾಖೆಯ ಯಾವ ಹುದ್ದೆಗಳು ವಿವರ ತಿಳಿಸುವುದು)

ಉ) ಈ ಕ್ರಮದಿಂದಾಗಿ ಆರ್ಥಿಕ ಮಿತವ್ಯಯ ಸಾಧಿಸಿದರೂ ಸಹ ನಿರುದ್ಯೋಗ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುವ ಆತಂಕ ಸರ್ಕಾರಕ್ಕಿಲ್ಲವೇ ಈ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಂಡಿದೆ

ಶ್ರೀ ಎಸ್.ಎಂ ಕೃಷ್ಣ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಆಡಳಿತ ಸುಧಾರಣಾ ಆಯೋಗವು ಶಿಫಾರಸ್ಸು ಮಾಡಿದ್ದಂತೆ ವಿಭಾಗ ಮಟ್ಟದ ಹುದ್ದೆಗಳನ್ನು ರದ್ದುಗೊಳಿಸುವ ಪ್ರಸ್ತಾವನೆಯು ತೀವ್ರ ಪರಿಶೀಲನೆಯಲ್ಲಿದೆ ಸರ್ಕಾರದಲ್ಲಿ ಅನಾವಶ್ಯಕ ಹುದ್ದೆಗಳನ್ನು ಗುರುತಿಸಿ ರದ್ದುಪಡಿಸುವುದು ನಿರಂತರ ಕ್ರಮವಾಗಿದೆ

ಉ) ಇಲ್ಲ

ಐ ವಿ ಫ್ಲೂಯಿಡ್ ಖರೀದಿಯಲ್ಲಿನ ಅವ್ಯವಹಾರ

775 (54) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಆರೋಗ್ಯ ಮತ್ತು ಕುಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಐ.ವಿ ಫ್ಲೂಯಿಡ್ ಖರೀದಿಯಲ್ಲಿ ಅವ್ಯವಹಾರ ಎಸಗಿದ ಜನರಲ್ ಮೆಡಿಕಲ್ ಸ್ಟೋರ್ಸ್‌ನ ನಿವೃತ್ತ ಹೆಚ್ಚುವರಿ ನಿರ್ದೇಶಕರ ವಿರುದ್ಧ ಲೋಕಾಯುಕ್ತ ವಿಚಾರಣೆ ನಡೆಸಿ ವರದಿ ಸಲ್ಲಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ಅಧಿಕಾರಿಯಿಂದ ಸುಮಾರು 70 ಲಕ್ಷ ರೂ ಗಳನ್ನು ವಸೂಲಿ ಮಾಡಬೇಕೆಂದು ಲೋಕಾಯುಕ್ತರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಕ ಸಚಿವರು)

ಅ) ಬಂದಿದೆ

ಆ) ಹೌದು – ಮಾನ್ಯ ಲೋಕಾಯುಕ್ತವು ತನಿಖಾ ವರದಿಯಲ್ಲಿ ಸರ್ಕಾರಕ್ಕೆ ನಷ್ಟವಾಗಿರುವ ರೂ 70 85 ಲಕ್ಷಗಳನ್ನು ಕೆ.ಎ ಪಿ ಎಲ್ ಮತ್ತು ಡಾ॥ ಬಿ ಬಿ ತಂಬಾಕದ, ಅವರಿಂದ ವಸೂಲಿ ಮಾಡಬೇಕಾಗುತ್ತದೆ ಎಂದು ತಿಳಿಸಿರುವುದರಿಂದ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ–14ಎ ರಡಿಯಲ್ಲಿ ಸಂಪೂರ್ಣವಾಗಿ ಇಲಾಖಾ ವಿಚಾರಣೆ ಮಾಡಲು ಲೋಕಾಯುಕ್ತಕ್ಕೆ ವಹಿಸುವಂತೆ ಶಿಫಾರಸ್ಸು ಮಾಡಿರುವರು

ಇ) 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 14ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಇವರ ವಿರುದ್ಧ ಕೂಲಂಕಷ ವಿಚಾರಣೆ ನಡೆಸಿ, ವರದಿ ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ ಆಕುಕ 99 ಎಂಎಸ್‌ಎ 2002 ದಿನಾಂಕ 1/1/2004ರಲ್ಲಿ ಕರ್ನಾಟಕ ಲೋಕಾಯುಕ್ತರಿಗೆ ವಹಿಸಿದೆ ವರದಿ ನಿರೀಕ್ಷಿಸಲಾಗಿದೆ

ಮಹಾನಗರ ಪಾಲಿಕೆಯ ವ್ಯಾಪ್ತಿಗಳಲ್ಲಿ ಕೊಳವೆ ಬಾವಿ ನಿರ್ಮಾಣ

29 (174) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000–01, 2001–02, 2002–03ದಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಕೊಳವೆ ಬಾವಿ ತೋಡಲಾಗಿದೆ (ವರ್ಷವಾರು ಹಾಗೂ ವಿಭಾಗವಾರು ವಿವರನೀಡುವುದು)

ಆ) ಕಳೆದ 3 ಸಾಲಿನಲ್ಲಿ ತೋಡಲಾದ ಕೊಳವೆ ಬಾವಿಗಳು ಎಷ್ಟು ಪ್ರಾರಂಭವಾಗಿವೆ ಎಷ್ಟು ನಿಷ್ಕ್ರಿಯಗೊಂಡಿವೆ (ವರ್ಷವಾರು ವಿವರ ನೀಡುವುದು)

ಇ) ಕೊಳವೆ ಬಾವಿ ತೋಡಲಿಕ್ಕಾಗಿ ಖರ್ಚು ಮಾಡಿದ ಹಣವೆಷ್ಟು? ಇದರಿಂದ ನಾಗರೀಕರಿಗೆ ಎಷ್ಟು ಸದುಪಯೋಗವಾಗಿದೆ?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) 2000–2001, 2001–2002 ಹಾಗೂ 2002–2003ನೇ ಸಾಲಿನಲ್ಲಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 501 ಕೊಳವೆ ಬಾವಿಗಳನ್ನು ತೋಡಲಾಗಿದೆ ವರ್ಷವಾರು ವಿವರಗಳು ಈ ಕೆಳಗಿನಂತಿವೆ

	2000–01,	**2001–02,**	**2002–03**	**ಒಟ್ಟು**
ಕೋ ಬಾ	137	227	13 /	501

(ವಾರ್ಡ್‌ವಾರು ವರ್ಷವಾರು ವಿವರವಾದ ಮಾಹಿತಿ ಪ್ರತ್ಯೇಕವಾಗಿ ಲಗತ್ತಿಸಿದೆ)

ಆ) ಕಳೆದ ಮೂರು ಸಾಲಿನಲ್ಲಿ ತೋಡಲಾದ ಒಟ್ಟು 501 ಕೊಳವೆ ಬಾವಿಗಳ ಪೈಕಿ 26 ಕೊಳವೆ ಬಾವಿಗಳು ನಿಷ್ಕ್ರಿಯಗೊಂಡಿವೆ ವರ್ಷವಾರು ವಿವರಗಳು ಈ ಕೆಳಕಂಡಂತಿವೆ